# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ ಯೋಜನೆಯನ್ನು 2020-21 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆದೇಶವನ್ನು ಪರಿಷ್ಕರಿಸುವ ಬಗ್ಗೆ.

28 OCT 2020

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/ಇ-5/ಮೀಇಯೋ/2019, ದಿನಾಂಕ: 20-07-2019.

(2) ಪತ್ರ ಸಂಖ್ಯೆ: DOF/TECHINL/32/2020, ದಿನಾಂಕ: 02-09-2020.

******

**ಪ್ರಸ್ತಾವನೆ:**

ರಾಜ್ಯ ಸರ್ಕಾರವು 2019-20 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ -77 ರಲ್ಲಿ ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ಸಹಾಯಧನ ನೀಡುವ ಉದ್ದೇಶದಿಂದ 2 ಕೋಟಿ ರೂ.ಗಳನ್ನು ನೀಡಲಾಗಿದೆ" ಎಂದು ಘೋಷಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, 2019-20 ನೇ ಸಾಲಿನ ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನವನ್ನು ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು, ಈ ಸಂಬಂಧ ನಮೂನೆ-1, 2, 3 ಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಪಂಜರ ಮೀನು ಕೃಷಿಯಲ್ಲಿ ಬಳಸುವ ಮೀನುಮರಿಗಳ ಉತ್ಪಾದನೆ ಕರ್ನಾಟಕದಲ್ಲಿ ಇರದೇ ಇರುವುದರಿಂದ ಪಕ್ಕದ ರಾಜ್ಯಗಳಾದ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಂದ ಮೀನುಮರಿಗಳನ್ನು ತರಿಸಬೇಕಾಗಿರುವುದರಿಂದ ಮೀನುಮರಿಗಳ ದರ ಮತ್ತು ಸಾಗಾಣಿಕೆ ವೆಚ್ಚ ಹೆಚ್ಚಾಗಿ ಪಂಜರ ಮೀನು ಕೃಷಿಕರಿಗೆ ಆರ್ಥಿಕವಾಗಿ ತೊಂದರೆಯಾಗಿರುತ್ತದೆ.

ಪ್ರಸ್ತುತ ಇರುವ ಸರ್ಕಾರಿ ಆದೇಶದಲ್ಲಿ ಫಲಾನುಭವಿಯು ಒಮ್ಮೆ ಮಾತ್ರ ಸಹಾಯಧನ ಪಡೆಯಲು ಅವಕಾಶವಿರುವುದರಿಂದ, ಪಂಜರ ಮೀನು ಕೃಷಿಕರು

ಎರಡನೇ ವರ್ಷದಲ್ಲಿ ಮೀನು ಕೃಷಿ ಕೈಗೊಳ್ಳಲು ಆಸಕ್ತಿ ತೋರಿಸುತ್ತಿಲ್ಲ ಹಾಗೂ ಇತ್ತೀಚಿನ ಕೋವಿಡ್ ಪರಿಸ್ಥಿತಿಯಿಂದಾಗಿ ಈ ಯೋಜನೆಯ ಅನುಕೂಲವನ್ನು ಒಳನಾಡಿನಲ್ಲಿ ಮೀನುಮರಿ ಖರೀದಿಸುವ ಮೀನುಕೃಷಿಕರಿಗೆ ಪ್ರತೀವರ್ಷ ಸಹಾಯಧನ ನೀಡುವ ರೀತಿಯಲ್ಲಿ ಪಂಜರ ಮೀನು ಕೃಷಿಕರಿಗೂ ಪ್ರತಿವರ್ಷ ನೀಡುವುದು ಸೂಕ್ತ ಮತ್ತು ಅಗತ್ಯವಾಗಿರುತ್ತದೆ.

ಮುಂದುವರೆದು, ಯುವಕರು ಪಂಜರ ಮೀನು ಕೃಷಿಯನ್ನು ಕೈಗೊಂಡು ಆರ್ಥಿಕವಾಗಿ ಸಧೃಡರಾಗಲು ಅನುಕೂಲವಾಗಲು ಹಲವಾರು ತರಬೇತಿ ಶಿಬಿರಗಳನ್ನು ಕರಾವಳಿ ಜಿಲ್ಲೆಗಳಲ್ಲಿ ಏರ್ಪಡಿಸಲು ಈ ಯೋಜನೆಯ ಆದೇಶದಲ್ಲಿ ಕೆಲವು ಬದಲಾವಣೆಗಳು ಅಗತ್ಯವಿರುವುದನ್ನು ಮನಗಂಡು ಸದರಿ ಆದೇಶದ ಅನುಬಂಧದಲ್ಲಿನ ಷರತ್ತು ನಿಬಂದನೆ ಕ್ರಮ ಸಂಖ್ಯೆ (7), (11) ಮತ್ತು (12) ನ್ನು ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-5 ಮೀಇಯೋ 2019, ಬೆಂಗಳೂರು ದಿನಾಂಕ: 27-10-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ: ಪಸಂಮೀ/ಇ-5/ಮೀಇಯೋ/2019, ದಿನಾಂಕ: 20-07-2019ರ ಆದೇಶದ ಅನುಬಂಧದ ಷರತ್ತು ಮತ್ತು ನಿಬಂಧನೆಗಳಲ್ಲಿನ ಕ್ರಮ ಸಂಖ್ಯೆ (7), (11) ಮತ್ತು (12) ಅನ್ನು ಈ ಆದೇಶದ **ಅನುಬಂಧ-1** ರಲ್ಲಿ ಅವುಗಳ ಮುಂದೆ ನಮೂದಿಸಿರುವಂತೆ ಪರಿಷ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.

**ಆದೇಶ ಸಂಖ್ಯೆ: ಪಸಂಮೀ ಇ-5 ಮೀಇಯೋ 2019, ಬೆಂಗಳೂರು ದಿನಾಂಕ: 27-10-2020ರ**

**ಅನುಬಂಧ-1**

| ಕ್ರಮ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-5 /ಮೀಇಯೋ/2019, ದಿನಾಂಕ: 20-07-2019 ರಂತೆ ಜಾರಿಯಲ್ಲಿರುವುದು | ಪ್ರಸ್ತುತ ಪರಿಷ್ಕರಿಸಿರುವುದು |
|---|---|---|
| ಕಂಡಿಕೆ-07 | ಹಿನ್ನೀರು ಪ್ರದೇಶಗಳಲ್ಲಿ ಪಂಜರ ಕೃಷಿ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕೇಜಿನ ವಿಸ್ತೀರ್ಣ 20x8x8 ಅಡಿಗಳಾಗಿರುತ್ತದೆ. ಒಂದು ಪಂಜರದಲ್ಲಿ 2500 ದೊಡ್ಡ ಗಾತ್ರದ ಮೀನುಮರಿಗಳ ಬಿತ್ತನೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಇರುವ ದರಗಳ ಪ್ರಕಾರ 2500 ದೊಡ್ಡ ಗಾತ್ರದ ಮೀನುಮರಿಗಳಿಗೆ ಮರಿ ಒಂದಕ್ಕೆ ರೂ.40 ರಂತೆ ಒಟ್ಟು ರೂ. 1,00,000ಗಳು ವೆಚ್ಚವಾಗುತ್ತದೆ. ಹೀಗೆ ಪ್ರತಿ ಪಂಜರದ ಘಟಕ ವೆಚ್ಚ ರೂ. 1,00,000 ಗಳಾಗಿರುತ್ತದೆ. ಈ ಯೋಜನೆಯಡಿ ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಟ ರೂ.50,000 ಪ್ರತಿ ಪಂಜರಕ್ಕೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಫಲಾನುಭವಿ ಗರಿಷ್ಠ 2 ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಅವಕಾಶ ಮಾಡಲಾಗಿದ್ದು, ಒಬ್ಬ ಫಲಾನುಭವಿಗೆ ಗರಿಷ್ಠ ರೂ.1.00 ಲಕ್ಷ ಸಹಾಯಧನ ನೀಡಲಾಗುವುದು. | ಹಿನ್ನೀರು ಪ್ರದೇಶಗಳಲ್ಲಿ ಪಂಜರ ಕೃಷಿ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕೇಜಿನ ವಿಸ್ತೀರ್ಣ 20x6x6 ಅಡಿಗಳಾಗಿರುತ್ತದೆ. ಒಂದು ಪಂಜರದಲ್ಲಿ 1000 ದೊಡ್ಡ ಗಾತ್ರದ ಮೀನುಮರಿಗಳ ಬಿತ್ತನೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಇರುವ ದರಗಳ ಪ್ರಕಾರ 1000 ದೊಡ್ಡ ಗಾತ್ರದ ಮೀನುಮರಿಗಳಿಗೆ ಮರಿ ಒಂದಕ್ಕೆ ರೂ.40 ರಂತೆ ಒಟ್ಟು ರೂ. 40,000-00ಗಳು ವೆಚ್ಚವಾಗುತ್ತದೆ. ಹೀಗೆ ಪ್ರತಿ ಪಂಜರದ ಘಟಕ ವೆಚ್ಚ ರೂ. 40,000-00 ಗಳಾಗಿರುತ್ತದೆ. ಈ ಯೋಜನೆಯಡಿ ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಟ ರೂ.20,000 ಪ್ರತಿ ಪಂಜರಕ್ಕೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಫಲಾನುಭವಿ ಗರಿಷ್ಠ 3 ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಅವಕಾಶ ಮಾಡಲಾಗಿದ್ದು, ಒಬ್ಬ ಫಲಾನುಭವಿಗೆ ಗರಿಷ್ಠ ರೂ.60,000-00ಗಳ ಸಹಾಯಧನ ನೀಡಲಾಗುವುದು. |
| ಕಂಡಿಕೆ-11 | ಸಹಾಯಧನ ಪಡೆಯಲು ಫಲಾನುಭವಿಯು ಒಮ್ಮೆ ಮಾತ್ರ ಅರ್ಹರಾಗಿರುತ್ತಾರೆ. | ಸದರಿ ಯೋಜನೆಯಡಿ ಹೂಡಿಕೆ ವೆಚ್ಚಗಳಿಗೆ ಸಹಾಯಧನವನ್ನು ಪಾವತಿಸುತ್ತಿರುವುದರಿಂದ, ಹೂಡಿಕೆ ಮಾಡುವ ಪ್ರತಿ ಫಲಾನುಭವಿಗೆ ಪ್ರತಿ ವರ್ಷವು ಸಹಾಯಧನವನ್ನು ಪಾವತಿಸುವುದು. ಪ್ರಥಮ ಆದ್ಯತೆಯನ್ನು ಹಿಂದಿನ ವರ್ಷದಲ್ಲಿ ಈ ಯೋಜನೆ ಸೌಲಭ್ಯವನ್ನು ಪಡೆಯದೇ ಇರುವ ಹೊಸ ಫಲಾನುಭವಿಗಳಿಗೆ ನೀಡುವುದು. ಸಹಾಯಧನಕ್ಕೆ ಅರ್ಜಿ ಸಲ್ಲಿಸುವ ಫಲಾನುಭವಿಗಳು ಮೀನುಗಾರಿಕೆ ಇಲಾಖೆಯಲ್ಲಿ ಮೊದಲು ನೊಂದಾಯಿಸಿಕೊಳ್ಳಬೇಕು. |
| ಕಂಡಿಕೆ-12 | ಇಲಾಖೆಯಿಂದ ಅಧಿಕೃತಗೊಳಿಸಿದ ಸರಬರಾಜುದಾರರಿಂದ ಮಾತ್ರ ಸೀಗಡಿ ಮರಿಗಳನ್ನು ಖರೀದಿಸಿಕೊಳ್ಳಬೇಕು. | ಅಧಿಕೃತ ಸರಬರಾಜುದಾರರಿಂದ ಅಥವಾ ಸ್ಥಳೀಯ ಸರಬರಾಜುದಾರರಿಂದ ಸೀಗಡಿ ಮರಿಗಳನ್ನು ಖರೀದಿಸಬಹುದು. ಮೀನುಮರಿ ದಾಸ್ತಾನನ್ನು ಇಲಾಖಾಧಿಕಾರಿಗಳ ಸಮಕ್ಷಮ ಮಾಡತಕ್ಕದ್ದು. |

Kamakshi U.A. 27/10/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.